**Misc No**: 2/2023 **P.W**: 1

## ದಿನಾಂಕ : 28.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು ಎದುರುದಾರರ ಪರ ಶ್ರೀ. ಬಿ.ಎಂ. ವಕೀಲರಿಂದ : -**

ನಾನು ಗೃಹಿಣಿಯಾಗಿದ್ದೇನೆ. ನನ್ನ ಊರು ಸಬ್ಬನಹಳ್ಳಿ. ನಮ್ಮ ಊರಿನಿಂದ ವಿವಾದಿತ ಜಮೀನು 3 ಕಿಮೀ ದೂರದಲ್ಲಿ ಇದೆ. ನನಗೆ 4 ಎಕರೆ 34 ಗುಂಟೆ ಮಂಜೂರಾಗಿದ್ದು, 5 ಗುಂಟೆ ಖರಾಬ್ ಆಗಿರುತ್ತದೆ. ಅದರ ಸರ್ವೆ ನಂ. 273. ಈ ಜಮೀನು 1979 ರಲ್ಲಿ ನನ್ನ ದೊಡ್ಡಪ್ಪನಿಗೆ ಮಂಜೂರಾಗಿರುತ್ತದೆ. ನನ್ನ ದೊಡ್ಡಪ್ಪನ ಹೆಸರು ಸಿದ್ದಯ್ಯ. ನನ್ನ ದೊಡ್ಡಪ್ಪ ತೀರಿಕೊಂಡಿರುತ್ತಾರೆ. ನನಗೆ ಈ ಜಮೀನು ವಿಲ್ ಮುಖಾಂತರ ಬಂದಿರುತ್ತದೆ.

ಓ.ಎಸ್.ನಂ. 125/2022 ದಾವೆಯಲ್ಲಿ ಸದರಿ ವಿಲ್ ಅನ್ನು ಹಾಜರುಪಡಿಸಿರುತ್ತೀರ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಮಂಜೂರು ಆದಾಗಲೂ ಸಹಾ ಆಸ್ತಿಯ ಸರ್ವೆ ನಂ. 273 ಎಂದು ಇತ್ತು. ಸದರಿ ಜಮೀನು ಈಗ ದುರಸ್ತ್ ಆಗಿರುತ್ತದೆ. ದುರಸ್ತ್ ಆದಾಗಲೂ ಸಹಾ ಸರ್ವೆ ನಂಬರ್ ಬದಲಾವಣೆಯಾಗಿಲ್ಲ. ದುರಸ್ತ್ ಆದಾಗ ಸರ್ವೆ ನಂಬರ್‌ಗಳು ಮತ್ತು ಪೋಡುಗಳು ಬದಲಾವಣೆಯಾಗುತ್ತದೆ ಎಂದರೆ ಸಾಕ್ಷಿ ನಮ್ಮ ಆಸ್ತಿಯ ಸರ್ವೆ ನಂಬರ್‌ನಲ್ಲಿ ಯಾವುದೇ ಬದಲಾವಣೆಯಾಗಿಲ್ಲ ಎಂದು ನುಡಿಯುತ್ತಾರೆ. ಎದುರುದಾರರಿಗೆ ಮಳಲಿ ಗ್ರಾಮದಲ್ಲಿ ಸರ್ವೆ ನಂ. 187 ರಲ್ಲಿ 1 ಎಕರೆ 10 ಗುಂಟೆ ಆಸ್ತಿ ಮಂಜೂರಾಗಿರುತ್ತದೆ ಎಂದರೆ ಗೊತ್ತಿಲ್ಲ. ಸರ್ವೆ ನಂ. 187 ರಲ್ಲಿಯ 1 ಎಕರೆ 10 ಗುಂಟೆ ಆಸ್ತಿಯಲ್ಲಿ ಮಂಜೂರಾದಾಗಿನಿಂದ ಎದುರುದಾರರು ಸ್ವಾಧೀನದಲ್ಲಿರುತ್ತಾರೆ ಎಂದರೆ ಗೊತ್ತಿಲ್ಲ. ಎದುರುದಾರರು ತಮ್ಮ ಆಸ್ತಿಯಲ್ಲಿ ಲೆವೆಲಿಂಗ್ ಮಾಡಿಕೊಂಡು ತೆಂಗಿನ ಗಿಡ ಹಾಕಿಕೊಂಡಿದ್ದಾರೆ ಎಂದರೆ ಸಾಕ್ಷಿ ನನ್ನ ಆಸ್ತಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ನುಡಿಯುತ್ತಾರೆ.

ಓ.ಎಸ್. ನಂ. 125/2022 ರಲ್ಲಿ ನ್ಯಾಯಾಲಯವು ಮಾಡಿದ ಏಕಪಕ್ಷೀಯ ಆದೇಶವನ್ನು ಎದುರುದಾರರು ಉಲ್ಲಂಘನೆ ಮಾಡಿಲ್ಲ ಎಂದರೆ ಸಾಕ್ಷಿ ನಾನು ಹಾಕಿಸಿದ್ದ ಟ್ರೆಂಚ್ ಮತ್ತು ತೆಂಗಿನ ಗಿಡಗಳನ್ನು ಎದುರುದಾರರು ಹಾಳು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರರು ನನ್ನ ಜಮೀನಿಗೆ ಯಾವತ್ತೂ ಬಂದಿಲ್ಲ, ನನಗೆ ಯಾವುದೇ ತೊಂದರೆಯನ್ನು ಸಹಾ ಕೊಟ್ಟಿಲ್ಲ, ಅವರು ತನ್ನ ಜಮೀನಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಎದುರುದಾರರು ನನ್ನ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದಾರೆ ಎಂದು ನಾನು ಪೊಲೀಸ್ ಠಾಣೆಗೆ ದೂರನ್ನು ಕೊಟ್ಟಿರುತ್ತೇನೆ. ಅದರ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಎದುರುದಾರರು ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿಲ್ಲ, ಅಲ್ಲದೇ ನನಗೆ ಯಾವುದೇ ತೊಂದರೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ವಿಲ್ ಮೂಲಕ ಬಂದಿದೆ ಎಂದು ಹೇಳುವ ಆಸ್ತಿ ಎಲ್ಲಿ ಇದೆ ಎಂದು ನನಗೆ ಗೊತ್ತಿರದೇ ಇದ್ದರೂ ಸಹಾ ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಾ.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರು
ಹೊಳೆನರಸೀಪುರ.